# ಬೆಟ್ಟದ ಜೀವ ಕೊರಗ್ಗಾಂಡ



ಕಾರಂತರ ‘ಬೆಟ್ಟದ ಜೀವ’ ಕಾದಂಬರಿಯ ಗೋಪಾಲಯ್ಯ ಯಾರಿಗೆ ಗೊತ್ತಿಲ್ಲ ಹೇಳಿ? ತಾನು ಬದುಕುತ್ತಿರುವ ನಿಸರ್ಗದಿಂದಲೇ ಜೀವಚೈತನ್ಯವನ್ನೂ–ಭಾವ ಚೈತನ್ಯವನ್ನೂ ತುಂಬಿಕೊಂಡು ಬದುಕಿನ ಕ್ರೌರ್ಯ–ಸೌಂದರ್ಯ ಎರಡನ್ನೂ ಅರಗಿಸಿಕೊಂಡು ಬದುಕುತ್ತಿರುವ ಕೊರಗ್ಗಾಂಡ ಎಂಬ ಅಜ್ಜನ ಈ ವ್ಯಕ್ತಿಚಿತ್ರಣ, ಬೆಟ್ಟದ ಜೀವಗಳ ಕೊನೆಯ ಕೊಂಡಿಯ ಸಮೀಪದರ್ಶನವೂ ಹೌದು.

■ ಗುರುಗಣೇಶ ಭಟ್ ಡಬ್ಗುಳಿ

ಅಚಾನಕ್ಕಾಗಿ ನಿಕ್ಕಿಯಾದ ತಿರುಗಾಟದ ನಾಲ್ಕನೇ ದಿನ. ಕುಂದಾಪುರದ ಮ್ಯಾಂಗ್ರೋ ಕಾಡು, ಕೊಡಚಾದ್ರಿ ಶ್ರೇಣಿ, ಸಾವೆಹಕ್ಲು ಡ್ಯಾಂಗಳನ್ನೆಲ್ಲ ಮುಗಿಸಿ ಇರುವ ಇನ್ನೆರಡು ದಿನದ ರಜೆಗೆ ಯಾವ ದಾರಿ ಎಂದು ಹುಡುಕುತ್ತಿದ್ದೆವು. ‘ಆಗುಂಬೆಗೆ ಹೋದರೆ ಹೇಗೆ! ಹೇಗಿದ್ದರೂ ನಮ್ಮ ಸ್ಕಂದನ ಮನೆಯಿದೆಯಲ್ಲ’ ಎಂದು ಹೊಳೆದದ್ದೆ ತಡ, ಗೆಳೆಯ ಇತಿಹಾಸನ ಬೈಕು ಕಾಳಿಂಗನ ನಾಡಿನತ್ತ ಓಡಿತು.

ಆಗುಂಬೆ ಪೇಟೆಯಿಂದ ಎಂಟು ಕಿ.ಮೀ.ಗೆ ಸ್ಕಂದನ ಮನೆ. ದಟ್ಟ ಕಾಡು. ಕಾಳಿಂಗ ಸರ್ಪಗಳ ತವರು. ಸಮೀಪದಲ್ಲೇ ಇರುವ ಕುಂದಾದ್ರಿ ಬೆಟ್ಟ ಏರಿದ್ದಾಯಿತು. ಆದರೂ ಸಮಾಧಾನವಿಲ್ಲ. ಆಗುಂಬೆಯ ಕಾಡು ತಿರುಗಬೇಕೆಂಬ ಹುಚ್ಚು ಆಸೆ. ನಕ್ಸಲ್ ಚಟುವಟಿಕೆಗಳಿಗೆ ಸುದ್ದಿಯಾದ ಜಾಗವದು. ಸ್ವಲ್ಪ ಹೆಚ್ಚು ಕಡಿಮೆ ಆದರೂ ತೊಂದರೆಗೆ ಸಿಲುಕುವ ಎಲ್ಲ ಸಾಧ್ಯತೆಗಳೂ ಇತ್ತು. ಆದರೂ ಎತ್ತರದ ಗುಡ್ಡ ಹುಡುಕಿ ಹತ್ತುವ ಉಮೇದು ಮಾಡಿದೆವು. ದಾರಿಯಲ್ಲಿ ಒಂದಾದರೂ ಕಾಡೆಮ್ಮೆ, ಕಾಳಿಂಗ ಸರ್ಪ ಕಾಣಬಹುದು ಎಂಬ ನಿರೀಕ್ಷೆಯಿಟ್ಟುಕೊಂಡು ಗುಡ್ಡದ ಅಳಿಸಿಹೋದ ದಾರಿಯ ಮೇಲೆ ಹೆಜ್ಜೆಯೂರುವಾಗ ಗಂಟೆ ಎಂಟರ ಮುಳ್ಳನ್ನು ದಾಟಿರಲಿಲ್ಲ. ಆಗಾಗ ಕಾಲಿಗೆ ಇಬ್ಬನಿಯ ತಣ್ಣಗಿನ ಸ್ಪರ್ಶವಾದಾಗ ಮೈ ನಡುಗುತ್ತಿತ್ತು. ಪ್ರತಿ ಸಲ ದೂರದ ಪೊದೆ ಅಲುಗಿದಾಗ ಕಾಡೆಮ್ಮೆಯೇ ಇರಬೇಕು ಎಂದು ಊಹಿಸುತ್ತಿದ್ದೆವು. ಒಂದೆಡೆ ಬಿದ್ದಿದ್ದ ಹಸಿ ಸಗಣಿ ತೋರಿಸಿ ‘ಇದು ಕಾಡೆಮ್ಮೆಯದ್ದೇ’ ಎಂದು ಹೆದರಿಸುತ್ತಿದ್ದ ಸ್ಕಂದ.

ಗುಡ್ಡದ ಬುಡವನ್ನೇನೋ ತಲುಪಿದೆವು. ತುದಿ ಮುಟ್ಟಲು ಇರುವುದು ಎರಡು ದಾರಿಯ ಅವಶೇಷ. ಅವೂ ನಮ್ಮನ್ನು ಗುಡ್ಡದ ನೆತ್ತಿ ಮುಟ್ಟಿಸುತ್ತವೆ ಎಂದು ಖಡಕ್ ಆಗಿ ಹೇಳುವಂತಿಲ್ಲ. ದಾರಿ ಮಧ್ಯದಲ್ಲಿ ಕವಲೊಡೆದು ಗಲಿಬಿಲಿಗೊಳಿಸಬಹುದು. ದಿಕ್ಕಿನ ಕಲ್ಪನೆಯಿಟ್ಟುಕೊಂಡು ನಡೆಯಬೇಕು. ಒಟ್ಟು ಗುಡ್ಡ ಏರಬೇಕಷ್ಟೆ. ‘ಹೀಗೆ ಹೋಗು ಮಗಾ’ ಎಂದು ಸರಿದಾರಿ ತೋರುವವರು ಒಬ್ಬರಿದ್ದಾರೆ, ಅವರನ್ನು ಕೇಳೋಣ ಎಂದುಕೊಂಡೆವು. ಆದರೆ ಅವರಿರಲಿಲ್ಲ. ಪಕ್ಕದಲ್ಲಿ ಬೇರೆ ಮನೆ ಮಾಡಿಕೊಂಡಿದ್ದ ಅವರ ಮಕ್ಕಳು ದಾರಿ ಹೇಳಿದರು. ನಾವು ಕಾಡೆಮ್ಮೆ, ಕಾಳಿಂಗದ ಭೀತಿಯಲ್ಲಿ, ಆಗುಂಬೆಯ ಅಪರಿಚಿತ ಗುಡ್ಡ ಹತ್ತಿ ಮೋಡಸಾಗರ ನೋಡಿ ಬಂದೆವು.

ನಾನು ಹೇಳಬೇಕಾಗಿರುವುದು ಗುಡ್ಡ ಇಳಿದ ಮೇಲಿನ ಕಥೆ.

ನಮಗೆ ದಾರಿ ತೋರಬೇಕಿದ್ದ ಮನುಷ್ಯನ ಹೆಸರು ಕೊರಗ್ಗಾಂಡ. ಉದ್ದ ದೇಹ, ಚೂಪು ಮುಖ. ಕವಳ ಮೆಂದ ದಪ್ಪ ತುಟಿ. ಜೋತು ಬಿದ್ದ ಗೊಂಚಲಿನಂಥ ಕಿವಿ. ನಮ್ಮ ಬರುವನ್ನೆ ಕಾದವರಂತೆ ಚಿಟ್ಟೆಯ ತುದಿಯಲ್ಲಿ ತುದಿಗಾಲಲ್ಲಿ ಕುಳಿತಿದ್ದರು.

‘ಹೋ ಅಜಾ, ಅರಾಮಿದ್ರಾ? ನಾನು ಅಸೀಮನೆ ಕುಮಾರಯ್ಯನ ಮಗ. ಇವರೆಲ್ಲ ನನ್ನ ಗೆಳೆಯರು’ ಎಂದು ಪರಿಚಯಿಸಿದ ಸ್ಕಂದ. ‘ಬನ್ನಿ ಮಕ್ಕಳಾ, ಬೆಳಿಗ್ಗೆ ಕೂಗುತ್ತಾ ಗುಡ್ಡ ಏರಿದವರು ನೀವೆ ಅಲ್ಲವಾ. ಮತ್ಯಾರು ಬರುತ್ತಾರೆ ಇಲ್ಲಿ?’ ಎಂದು ಬಾಯ್ತುಂಬ ಬೊಚೊಬೊಚೊ ನಕ್ಕು ಕಾಲು ಬಿಡಿಸಿ ಕಾಲ ಮೇಲೆ ಕಾಲು ಹಾಕಿದರು. ಎದೆ, ಕಣ್ಣುಗಳು ಸಮಾನ ಆಳದ ಕುಳಿಬಿದ್ದಿದ್ದವು. ಅವರಷ್ಟೇ ವರ್ಷದ, ಉದ್ದಕೈ ಸ್ವೆಟರು ಖಾಕಿ ಬಣ್ಣದ ಚಡ್ಡಿಯೊಳಗೆ ಅವಿತು ಕುಳಿತಂತೆ ಕಾಣುತ್ತಿದ್ದರು. ಗಂಟಲಿನ ನರಗಳು ಇಳಿಬಿದ್ದಿದ್ದವು. ಕೈಬೆರಳ ಬುಡ